ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಸಾರ್ವಜನಿಕರ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ".

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಸಾರ್ವಜನಿಕರ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಾಡಿರುವಂತೆ ಅಂಗೀಕರಿಸುವುದು".

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು*

## ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1999

*ಪರ್ಯಾಲೋಚನಾ ಪ್ರಸ್ತಾವ*

ಶ್ರೀ ಬಿ. ಸೋಮಶೇಖರ್ (ಮಾನ್ಯ ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

*ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಮಸೂದೆ ಮೇಲ್ಮನೆಯಲ್ಲಿ ಅಂಗೀಕಾರವಾಗಿ ಈಗ ಈ ಕೆಳಮನೆಗೆ ಬಂದಿದೆ. ನಮ್ಮ ಸರ್ಕಾರ ಮಹತ್ತರವಾದಂಥ, ಐತಿಹಾಸಿಕವಾದಂಥ ತೀರ್ಮಾನವನ್ನು ತೆಗೆದುಕೊಂಡು ಈ ಮಸೂದೆಯನನ್ನು ತಂದಿದೆ. ಸೆಕ್ಷನ್ 94 ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಸರ್ಕಾರಿ ಜಮೀನಿನಲ್ಲಿ ಯಾರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆಯೋ ಅಂಥವರಿಗೆ ಸಾಗುವಳಿ ಚೀಟಿ ಕೊಡತಕ್ಕಂಥದ್ದು ಕಾನೂನಿನಲ್ಲಿದೆ. ಇದೇ ರೀತಿಯಾಗಿ ಸುಮಾರು 25 ರಿಂದ 30 ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಕೆಲವು ಬಡವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇವತ್ತಿನದಿವಸ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಬಡವರು ಸುಮಾರು 5 ರಿಂದ 10 ಸಾವಿರದವರಗೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ರೀತಿಯಾಗಿ ಕಟ್ಟಿಕೊಂಡಿರತಕ್ಕಂಥ ಮನೆಗಳ ಬೀದಿಗಳೇ ಇವತ್ತು ಇವೆ, ಆದರೆ ಇವುಗಳಿಗೆ ಯಾವುದೇ ರೀತಿಯ ಅಲಿನಿಯೇಷನ್ ಆಗಿಲ್ಲ. ಮತ್ತು ಇವರಿಗೆ ಯಾವುದೇ ರೀತಿಯ ಸವಲತ್ತುಗಳು ಇವತ್ತಿನ ದಿವಸ ಸಿಗುತ್ತಿಲ್ಲ. ಕಾರಣ ಏನೆಂದರೆ, ಅವರ ಮನೆಗಳು ರೆಗ್ಯುಲರೈಜ್ ಆಗಿಲ್ಲ. ಈ ಸಮಸ್ಯೆ ಸುಮಾರು 10-20 ವರ್ಷಗಳಿಂದಲೂ ಹಾಗೆ ಉಳಿದಿದೆ. ಇವರನ್ನು ಈಗ ಹೊರಗಡೆಗೆ ಹಾಕುವುದಕ್ಕೂ ಸಹ ಆಗುವುದಿಲ್ಲ. ಆದ್ದರಿಂದ ಇಂಥವರಿಗೂ ಸಹ ರೆಗ್ಯುಲರೈಜ್ ಮಾಡತಕ್ಕಂಥ ಈ ಒಂದು ಕಾನೂನಿಗೆ ತಿದ್ದುಪಡಿಯನ್ನು ತಂದಿದ್ದೇವೆ. ಒಂದು ತಾಲ್ಲೂಕಿನಲ್ಲಿ ಸುಮಾರು 10 ಸಾವಿರ ಮನೆಗಳಿಂದರೆ, ಇಡೀ ರಾಜ್ಯದಲ್ಲಿ ಸುಮಾರು 10 ಲಕ್ಷ ಕುಟುಂಬಗಳವರಿಗೆ

ಮನೆಗಳನ್ನು ರೆಗ್ಯುಲರೈಜ್ ಮಾಡಿರತಕ್ಕಂಥ ಹಕ್ಕು ಪತ್ರಗಳನ್ನು ಕೊಡುತ್ತಿದ್ದೇವೆ. ಇದಕ್ಕೆ ಮೊದಲು ಅವಕಾಶ ಇರಲಿಲ್ಲ. ಸೆಕ್ಷನ್ 94ಎ ಮತ್ತು ಬಿ ಈಗಾಗಲೇ ಇದೆ. ಸೆಕ್ಷನ್ 94 (ಸಿ)ಯನ್ನು ಮಾಡಿದ್ದೇವೆ. ಕೇವಲ ಜಮೀನುಗಳಿಗೆ ಮಾತ್ರ ಸಾಗುವಳಿ ಚೀಟಿ ಕೊಡುತ್ತಿದ್ದೆವು. ಆದರೆ, ಈ ಕಾಯಿದೆಯಿಂದ ಅವರನ್ನು ಮನೆಗಳಿಗೂ ಹಕ್ಕುದಾರರಾಗಿ ಮಾಡತಕ್ಕಂಥ ಒಂದು ಕಾನೂನು ಆಗಿದೆ. ಇದು ಬಹಳ ವರ್ಷಗಳಿಂದ ಇದ್ದಂಥ ಬೇಡಿಕೆಯಾಗಿದೆ. ಮತ್ತು ಪ್ರತಿಯೊಬ್ಬ ಶಾಸಕರಿಗೂ ಸಹ ಬೇಕಾದಂಥ ಒಂದು ಬೇಡಿಕೆಯಾಗಿದೆ. ಕೆಲವು ಕಡೆ ಗೋಮಾಳ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡಿರಬಹುದು ಅಥವಾ ಮಂಗಳೂರು ಕಡೆ ಖಿಮ್ಮಿ ಜಮೀನಿನಲ್ಲಿ ಮತ್ತು ಕೆಲವು ಕಡೆ ಖರಾಬ್ ಲ್ಯಾಂಡ್‌ನಲ್ಲಿ ಹಾಗೂ ಸೊಪ್ಪಿನ ಬೆಟ್ಟದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇಂಥ ಮನೆಗಳನ್ನು ಕಟ್ಟಿರತಕ್ಕಂಥ ಊರುಗಳು ಇವತ್ತು ಇವೆ. ಆದರೆ ಫಾರೆಸ್ಟ್ ಲ್ಯಾಂಡ್‌ನಲ್ಲಿ ಮನೆಗಳನ್ನು ಕಟ್ಟಿಕೊಂಡಿರುವಂಥವರಿಗೆ ನಾವು ರೆಗ್ಯುಲರೈಜ್ ಮಾಡುವುದಕ್ಕೆ ನಮಗೆ ಅವಕಾಶ ಇಲ್ಲ. ಅವರನ್ನು ಈ ಕಾನೂನಿನ ಕ್ರಮಕ್ಕೆ ಒಳಪಡಿಸುವುದಕ್ಕೆ ಆಗುವುದಿಲ್ಲ, ಆದರೂ ನಾವು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಬರೆಯುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : 20 ವರ್ಷಗಳ ಹಿಂದೆ ಹಿಡುವಳಿ ಜಾಗದಲ್ಲಿ ಮತ್ತೆ ಬೇರೆಯವರ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದರೆ ನೀವು ಏನು ಮಾಡುತ್ತೀರಿ?

ಶ್ರೀ ಬಿ. ಸೋಮಶೇಖರ್ : ಅದನ್ನೂ ನಾವು ರೆಗ್ಯುಲರೈಸ್ ಮಾಡುತ್ತೇವೆ. ಬೇರೆಯವರ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದರೆ ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ? ನಿಮ್ಮ ಜಾಗದಲ್ಲಿ ನಾನು ಮನೆ ಕಟ್ಟಲಿಕ್ಕೆ ಆಗುತ್ತದೆಯೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇದು ನಗುವಂತಹ ವಿಚಾರವಲ್ಲ. ಪರಿಶಿಷ್ಟಜಾತಿ ಜನ 10-15 ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಮನೆಗಳನ್ನು ಕಟ್ಟಿದ್ದಾರೆ. ಅದು ಬೇರೆಯವರ ಜಮೀನಿನಲ್ಲಿ ಅವರು ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಅವರು ಆ ಜಾಗವನ್ನು ಬಿಡುವ ಸ್ಥಿತಿಯಲ್ಲಿ ಇಲ್ಲ. ನಾನು ಹೇಳುತ್ತಿರುವುದು ಅಂತಹ ಸಮಯದಲ್ಲಿ ನಾವು ಏನು ಮಾಡಬೇಕೆಂದು. ಆ ಏರಿಯಾದಲ್ಲಿರತಕ್ಕ ಲ್ಯಾಂಡ್ ವ್ಯಾಲ್ಯೂವನ್ನು ಕೊಟ್ಟು ಅವರಿಗೆ ಅನುಕೂಲ ಮಾಡಿಕೊಡಬೇಕು.

ಶ್ರೀ ಬಿ. ಸೋಮಶೇಖರ್ : ಈಗ ಇಲ್ಲಿರತಕ್ಕ ವಿಚಾರ ಮಾತನಾಡಿ. ತಾವು ಹೇಳುತ್ತಿರುವುದು ಬೇರೆ ವಿಚಾರ. 10 ಲಕ್ಷಕ್ಕೂ ಹೆಚ್ಚು ಅನಧಿಕೃತ ಮನೆಗಳು ಇಡೀ ರಾಜ್ಯದಲ್ಲಿವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮನೆಗಳನ್ನು ಸರ್ವೆ ನಂಬರಿನಲ್ಲಿ ಮನೆಗಳನ್ನು ಕಟ್ಟಿರುವ ಜಾಗವನ್ನು ಅವರಿಗೆ ಗ್ರಾಂಟ್ ಮಾಡಬಹುದು. ಕಟ್ಟಿರುವ ಮನೆಗಳ್ನು ನೀವು ಖಾಯಂ ಮಾಡುವುದಾದರೆ ಪಂಚಾಯಿತಿಗಳ ಅಧಿಕಾರ ಎಲ್ಲಿ ಉಳಿಯಿತು?

ಶ್ರೀ ಅರಗ ಜ್ಞಾನೇಂದ್ರ : ಅವರಿಗೆ ರೆವಿನ್ಯೂ ನವರು ಹಕ್ಕುಪತ್ರ ಕೊಟ್ಟಮೇಲೆ ಪಂಚಾಯಿತಿಯವರ ಅಸೆಸ್ ರಿಜಿಸ್ಟರ್‌ನಲ್ಲಿ ಸೇರಿಸಬಹುದು.

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) : ಗ್ರಾಮಠಾಣದಲ್ಲಿ ಬರುವಂತಹದ್ದು ಪಂಚಾಯಿತಿಗೆ ಬರುತ್ತದೆ, ರೆವಿನ್ಯೂಗೆ ಬರುವುದಿಲ್ಲ. ಗ್ರಾಮಠಾಣದಿಂದ ಆಚೆ ಬರತಕ್ಕದ್ದು ರೆವಿನ್ಯೂಗೆ ಬರುತ್ತದೆ. ಆ ರೀತಿ ಅದು ರೈಟ್ಸ್ ಕನ್‌ಫರ್ಮ್ ಮಾಡುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅನಧಿಕೃತವಾಗಿ ಗೌರ್ನಮೆಂಟ್ ಜಾಗದಲ್ಲಿ, ರೆವಿನ್ಯೂ ಲ್ಯಾಂಡ್‌ನಲ್ಲಿ ಮನೆಗಳನ್ನು ಕಟ್ಟಿರುವ ಜಾಗವನ್ನು ಖಾಯಂಗೊಳಿಸಲಿಕ್ಕೆ ಈ ಬಿಲ್ ತಂದಿದ್ದಾರೆಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಆ ಜಾಗವನ್ನು ಓನರ್‌ಗೆ ಕೊಡಲಿಕ್ಕೆ, ಅದು ರೆವಿನ್ಯೂ ಲ್ಯಾಂಡ್ ಆಗಿದ್ದರೆ ನಮ್ಮದೇನೂ ತಕರಾರು ಇಲ್ಲ, ಮನೆ ಖಾಯಂ ಮಾಡಬೇಕಾದರೆ ನೀವು ಪಂಚಾಯಿತಿ ಅಧಿಕಾರವನ್ನು ಕಸಿದುಕೊಳ್ಳಲಿಕ್ಕೆ ಆಗುವುದಿಲ್ಲ ಅವರ ಹತ್ತಿರ ಹೋಗಬೇಕು ಅರ್ಜಿ ಹಾಕಿಕೊಳ್ಳಬೇಕು.

MR. SPEAKER : Why are you getting confused?

ಶ್ರೀ ಜೆ.ಸಿ. ಮಾಧುಸ್ವಾಮಿ : ಇವರು ಲ್ಯಾಂಡ್ ಎಂದು ಹೇಳಿಲ್ಲ, ಡ್ವೆಲಿಂಗ್ ಹೌಸ್ ಅನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ. ಸೋಮಶೇಖರ್ : ತಾತ್ವಿಕವಾಗಿ, ನಾವು ಆ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡಿರುವುದಕ್ಕೆ ರೆಗ್ಯುಲರೈಸ್ ಮಾಡುತ್ತಿದ್ದೇವೆ. ಆದರೆ ಯಾವ ರೀತಿ ಹಣ ಕಲೆಕ್ಟ್ ಮಾಡಬೇಕು, ಯಾರಿಗೆ ಫ್ರಿಯಾಗಿ ಕೊಡಬೇಕು, ಆ ಹಣ ಪಂಚಾಯಿತಿಗೆ ಹೋಗಬೇಕೆ ಅಥವಾ ಸರ್ಕಾರಕ್ಕೆ ಬರಬೇಕೆ ಇದನ್ನೆಲ್ಲಾ ನಾವು ರೂಲ್ಸ್‌ನಲ್ಲಿ ಅಡಾಪ್ಟ್ ಮಾಡುತ್ತೇವೆ.

MR. SPEAKER : Otherwise also it is very clear; the intended object of the amend is to confer the right of ownership to the person who is in possession of the land. When once he becomes the owner of the land, it is for him to regularise the construction. ಪಂಚಾಯಿತಿಗೆ ಅದು ಬಂದರೆ ಪಂಚಾಯಿತಿಗೆ ಹಾಕಿಕೊಳ್ಳುತ್ತಾರೆ, ಮುನಿಸಿಪಾಲಿಟಿಗೆ ಬಂದರೆ ಮುನಿಸಿಪಾಲಿಟಿಗೆ ಹಾಕಿಕೊಳ್ಳುತ್ತಾರೆ. ಯಾರು ಸಂಬಂಧಪಟ್ಟ ಲೋಕಲ್‌ಬಾಡೀಸ್ ಇದ್ದಾರೆ ಅವರು ಅಸೆಸ್‌ಮೆಂಟ್ ಮಾಡುತ್ತಾರೆ. ರಿಜಿಸ್ಟರ್‌ಗೆ ಎಂಟರ್ ಮಾಡಿಕೊಳ್ಳುತ್ತಾರೆ. ಅವರಿಂದ ಬೇಕಾಗಿರತಕ್ಕ ಹಣ ವಸೂಲಿ ಮಾಡಿಕೊಳ್ಳುತ್ತಾರೆ.

ಶ್ರೀ ಬಿ. ಸೋಮಶೇಖರ್ : ಇದನ್ನು ಸಿಂಪ್ಲಿಫೈ ಮಾಡಿ ಒಂದು ತರಹ ಸಿಂಗಲ್ ವಿಂಡೋ ಪಜೆನ್ಸಿ ಮಾಡಿ ಇಷ್ಟು ದಿವಸದೊಳಗಾಗಿ ಅವನಿಗೆ ರೆಗ್ಯುಲರೈಸ್ ಮಾಡುತ್ತೇವೆಂದು ಹೇಳತಕ್ಕದ್ದು.

ಅಧ್ಯಕ್ಷರು : ಆ ಜಾಗದ ವಿಚಾರದಲ್ಲಿ ಅವನಿಗೆ ಯಜಮಾನಿಕೆ ಬಾರದ ಹೊರತು, ಓನರ್‌ಶಿಪ್ ಬಾರದ ಹೊರತು he will not be entitled to ask for any facility.

ಶ್ರೀ ಮಲ್ಲಿಕಾರ್ಜುನ ಖರ್ಗೆ : (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಪ್ರಾವಿಜನ್ ಈ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿದೆ. ಎಲ್ಲಿ ಅಂದರೆ ಪರ್ಟಿಕ್ಯುಲರ್ಲಿ ಸೌತ್‌ಕೆನರಾ

ಡಿಸ್ಪ್ಯಿಕ್ಟ್ ನಲ್ಲಿ ಎಲ್ಲೆಲ್ಲಿ ಮನೆಗಳನ್ನು ಕಟ್ಟಕೊಂಡಿದ್ದಾರೆ ಆ ಮನೆಗಳ ಜೊತೆಯಲ್ಲಿ ಇಷ್ಟೊಂದು ಜಾಗವನ್ನು ಖಾಯಂ ಮಾಡಿಕೊಡಬೇಕೆಂದು ಹೇಳಿ, ರೆಗ್ಯುಲರೈಸ್ ಮಾಡಿದ್ದೇವೆ.

ಅಧ್ಯಕ್ಷರು : ಮೊದಲೆಲ್ಲಾ ಮಂಗಳೂರು ಸಿಟಿಯಲ್ಲಿ ಸುಮಾರು ಕೇಸುಗಳು ಆಗಿ ಹೋಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದೆಲ್ಲಾ ರೆಗ್ಯುಲರೈಸ್ ಆಗಿದೆ. ಅದಕ್ಕೆ ಇದು ರೆವಿನ್ಯೂ ಲ್ಯಾಂಡ್‌ನಲ್ಲಿ ಮಾಡುವಾಗ ನಾವು ಪುನಃ ಪಂಚಾಯಿತಿಗೆ ಹೋದರೆ ಏನಾಗುತ್ತದೆಂದರೆ, ಅಲ್ಲಿಯೂ ಎಕ್ಸ್‌ಪ್ಲಾಯ್‌ಟೇಷನ್, ಪ್ಲಸ್ ಇಲ್ಲಂತೂ ತಹಶೀಲ್‌ನಲ್ಲಿ ಬೇಗ ಆಗುವುದಿಲ್ಲ. ಹೀಗೆ ಎರಡೆರಡು ಏಜೆನ್ಸಿಗಳನ್ನು ಮಾಡಿದರೆ ಅವನು ನಿರ್ನಾಮ ಆಗುತ್ತಾನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಗಮನಿಸಬೇಕು, ಇಲ್ಲಿ ಮನೆ ಕಟ್ಟಿದ ಜಾಗವನ್ನು ಅಷ್ಟೇ ಕನ್‌ಫರ್ಮ್ ಮಾಡುವುದೆ ಹೇಗೆ? ನಾನು ಹುಟ್ಟಿದ ಮನೆ ಇನ್ನೂ ಕನ್‌ಫರ್ಮ್ ಆಗಿಲ್ಲ. ನಾವು ಅಲ್ಲಿ ಕಣ ಮಾಡಿಕೊಂಡಿದ್ದೇವೆ, ಅದು ಕಾಂಪೌಂಡ್ ಸೇರಿನೋ ಅಥವಾ ಮನೆ ಕಟ್ಟಿರುವ ಜಾಗನಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಲೆನಾಡಿನವರು ದೇಶವನ್ನೆಲ್ಲಾ ಎನ್‌ಕ್ರೋಚ್ ಮಾಡುತ್ತಾರೆ, ಏನು ಮಾಡುವುದು? ಮಾನ್ಯ ಕಾಗೋಡು ತಿಮ್ಮಪ್ಪ ಇಡೀ ಸಾಗರದ ತುಂಬಾ ಎನ್‌ಕ್ರೋಚ್ ಮಾಡಲಿಕ್ಕೆ ಹತ್ತಿದ್ದಾರೆ.

ಅಧ್ಯಕ್ಷರು : ರೆಗ್ಯುಲರೈಸ್ ಮಾಡುವುದಕ್ಕೆ ಅಪ್ಲಿಕೇಷನ್ ಹಾಕಿಕೊಳ್ಳುವವರು ಹಾಕಿಕೊಳ್ಳುತ್ತಾರೆ. ಅವರ ಉಪಯೋಗದಲ್ಲಿ ಜಮೀನು ಎಷ್ಟಿದೆ ಅಷ್ಟನ್ನು ಕೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವರೆಲ್ಲರೂ ಅನ್‌ಆಥರೈಸ್ಡ್ ಕಲ್ಟಿವೇಟರ್ಸ್. ಅನ್ ಆಥರೈಸ್ಡ್ ಆಗಿ ಹೋಗುವುದು ಅಲ್ಲಿ ಕಲ್ಟಿವೇಟ್ ಮಾಡುವುದು ಅದನ್ನೆಲ್ಲಾ ರೆಗ್ಯುಲರೈಸ್ ಮಾಡುವುದು.

ಅಧ್ಯಕ್ಷರು : ಒಂದೇ ಒಂದು ನಿಮಿಷ. There is an aspersion cast on people of Shimoga by the Hon'ble Leader of Opposition. ನೀವು ಎಲ್ಲಾ ಕಡೆಗೆ ಹೋಗಿ ಅನ್‌ಆಥರೈಸ್ಡ್ ಕಲ್ಟಿವೇಟ್ ಮಾಡಿಬಿಟ್ಟು ಅದನ್ನು ರೆಗ್ಯುಲರೈಸ್ ಮಾಡಿಕೊಳ್ಳುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡುವುದು, ಇಲ್ಲಿ ಈ ಸದನದ ಮುಂದೆ ಬರುವುದು. ಶ್ರೀ ಕಾಗೋಡು ತಿಮ್ಮಪ್ಪನವರು ಸಾಗರದಲ್ಲಿ ಹಾಗೆ ಮಾಡುವುದು, ಶ್ರೀ ಜ್ಞಾನೇಂದ್ರರವರು ಹಾಗೆ ಮಾಡುವುದು, ತಾವು ಚನ್ನಗಿರಿಯಲ್ಲಿ ಅದೇ ರೀತಿಯಾಗಿ ಮಾಡುವುದು. ಹೀಗೆ ಮಾಡಿದರೆ ಹೇಗೆ? ಅನ್‌ಆಥರೈಸ್ಡ್ ಕಲ್ಟಿವೇಟ್ ಮಾಡುವುದು, ಆಮೇಲೆ ರೆಗ್ಯುಲರೈಸ್ ಮಾಡಿ ಅನ್ನುವುದು?

MR. SPEAKER : There is something in the lighter side.

+ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಬರೀ ಶಿವಮೊಗ್ಗದಲ್ಲಿ ಅಲ್ಲ, ಎಲ್ಲಾ ಜಿಲ್ಲೆಗಳಲ್ಲೂ ತೀರಾ ಬಡವರು ಅನ್‌ಆಥರೈಸ್ಡ್‌ಆಗಿ ಕಲ್ಟಿವೇಟ್ ಮಾಡಿರುತ್ತಾರೆ. ಅವರು ಪೊಸೆಷನ್‌ನಲ್ಲಿರುತ್ತಾರೆ. ಆದರೆ ಅವರಿಗೆ ಬೇರೆ ರೀತಿಯ ಫೆಸಿಲಿಟೀಸ್ ಸಿಗುವುದಿಲ್ಲ. ಅದನ್ನು ರೆಗ್ಯುಲರೈಸ್ ಮಾಡುವುದರಿಂದ ಅವರಿಗೂ ಅನುಕೂಲವಾಗುತ್ತದೆ, ಸರ್ಕಾರಕ್ಕೂ ಅನುಕೂಲವಾಗುತ್ತದೆ. ಬರೀ ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿ ಅಲ್ಲ, ಗುಲ್ಬರ್ಗ ಡಿಸ್ಟ್ರಿಕ್ಟ್‌ನಲ್ಲೂ ಹೀಗೆ ಅನಾಥರೈಸ್ಡ್ ಕಲ್ಟಿವೇಷನ್ ಮಾಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮಗೆ ಆಗಿರತಕ್ಕ ತಾಪತ್ರೆಯ ಏನೆಂದರೆ, ಈ ಬಗ್ಗೆ ಶಿವಮೊಗ್ಗ ಜಿಲ್ಲೆಯವರದ್ದು ಕಾಟ ಜಾಸ್ತಿ ಎಂದು ನಾವು ಹೇಳಿದರೆ, ಇವರು ಎಲ್ಲಾ ಕಡೆಗೆ ಅನ್ವಯಿಸಿ ಹೇಳುತ್ತಾರೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಕಾಗೋಡು ತಿಮ್ಮಪ್ಪನವರು ಸಾಗರದಲ್ಲಿ ಏನು ಮಾಡಿದ್ದಾರೆ ಎಂಬುದು ನನಗೆ ಗೊತ್ತಿದೆ. ಅದಕ್ಕೋಸ್ಕರ ಒಂದು ಹೋರಾಟವನ್ನೇ ನಾವು ಮಾಡಿದ್ದೇವೆ. ಅವರು ಅಂತಹದ್ದೆಲ್ಲಾ ತಪ್ಪು ಮಾಡುವುದಕ್ಕೆ ಹೋಗುವುದಿಲ್ಲ. ನೀವು ಏನಾದರೂ ಮಾಡಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿದ್ದರೆ, ನೀವು ರೆಗ್ಯುಲರೈಸ್ ಮಾಡಿದ ಮೇಲೆ ದಾರಿ ಇಲ್ಲದಿದ್ದರೆ ಏನು ಮಾಡುತ್ತೀರಿ ಎಂಬುದಕ್ಕೆ ಉತ್ತರ ಹೇಳಬೇಕಾಗುತ್ತದೆ. ಅಕಸ್ಮಾತ್ ನಾನೊಂದು ಮನೆ ಕಟ್ಟಿರುತ್ತೇನೆ, ಅಲ್ಲಿಗೆ ರಸ್ತೆ ಇಲ್ಲ, ರಸ್ತೆ ಮಾಡುವವರು ಯಾರಾದರೂ ಪಕ್ಕದ ಜಮೀನನ್ನು ರಸ್ತೆಗೆ ಬಿಟ್ಟುಕೊಡಿಸುತ್ತೀರಾ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಾನು ಬಳ್ಳಾರಿ ನಗರಕ್ಕೆ ಹೋಗಿದ್ದೆ. ಅಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು ಒಂದು ಬೀದಿಯಲ್ಲಿ ಹಿಂದುಳಿದ ವರ್ಗದವರು ಒಂದು ಬೀದಿಯಲ್ಲಿ 30-40 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಸಹ ಅದೇ ರೀತಿ ಇದೆ. ಎರಡೆರಡು ಜನರೇಷನ್‌ಗಳು ಆಗಿವೆ. ಪ್ರತಿಯೊಂದು ಕ್ಷೇತ್ರಗಳಲ್ಲೂ ಇದೇ ರೀತಿ ಇದೆ. ನಮ್ಮ ಮಾನ್ಯ ಉಪಮುಖ್ಯಮಂತ್ರಿಯವರ ಕ್ಷೇತ್ರದಲ್ಲಿ ಒಂದೆರಡು, ನನ್ನ ಊರಿನಲ್ಲಿ ಒಂದೆರಡು, ಪ್ರತಿಯೊಂದು ತಾಲ್ಲೂಕುಗಳಲ್ಲೂ ಊರು ಊರುಗಳೇ ಬಂದಿವೆ. ಅಲ್ಲಿ ಅಲಿನೇಷನ್ ಆಗಿಲ್ಲ. ನಮ್ಮ ಉದ್ದೇಶ ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿದಹಾಗೆ, ಅವರಿಗೂ ಹಕ್ಕೂ ಇಲ್ಲ, ಸರ್ಕಾರಕ್ಕೆ ಅವರಿಂದ ಏನೂ ಲಾಭನೂ ಬರುವುದಿಲ್ಲ ಅವರು ಮುಂದೆ ಡೆವಲಪ್ ಮಾಡಿಕೊಳ್ಳುವುದಕ್ಕೆ ಅವಕಾಶವೂ ಇಲ್ಲ. ಅವರಿಗೆ ಸಾಲ ಸೌಲಭ್ಯಗಳೂ ಸಹ ಸಿಗುವುದಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಪೀರಿಯಡ್‌ನಲ್ಲಿ 14.4.91ರೊಳಗಡೆ ಅಂದರೆ ಡಾ। ಅಂಬೇಡ್ಕರ್ ಹುಟ್ಟಿದ ದಿವಸದೊಳಗಡೆ ಯಾರ್ಯಾರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದರು ಅವರಿಗೇ ಕೊಡಬೇಕೆಂದು ಹೇಗೆ ಮಾಡಿದರೋ ಅದೇ ರೀತಿ 14.4.98ರೊಳಗಡೆ ಎಲ್ಲೆಲ್ಲಿ ಮನೆಗಳು ಇವೆ, ಅವರಿಗೆ ಮಾತ್ರ ಇದು ಅನ್ವಯಿಸುತ್ತದೆ. ಹೊಸದಾಗಿ ಒತ್ತುವರಿ ಮಾಡಿ ಕೊಂಡಿರುವವರಿಗೆ ಕೊಡುವುದಿಲ್ಲ. ಉದ್ದೇಶ ಏನೆಂದರೆ, ಯಾರ್ಯಾರು ಬಡವರು ಇದ್ದಾರೆ ಅವರ ಹೆಸರಿಗೆ ಖಾತೆ ಮಾಡುವುದು.

ಶ್ರೀ ವಿ. ಮುನಿಯಪ್ಪ : ಈ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ಕಟ್ಟಿರತಕ್ಕ ಮನೆಗಳನ್ನು ರೆಗ್ಯುಲರೈಸ್ ಮಾಡುವುದಕ್ಕೆ ಈ ಶಾಸನವನ್ನು ತಂದಿದ್ದಾರೆ. ನಮ್ಮಲ್ಲಿ ಒಂದು ವಿಶೇಷ ಪ್ರಕರಣ

ಏನೆಂದರೆ, ಟೌನ್ ಪಕ್ಕದಲ್ಲಿ ಕೆರೆಗಳು ಇವೆ. ಕೆರೆ ಅಂಗಳದಲ್ಲಿ ಅನೇಕರು ಇವತ್ತು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಕೆರೆ ಅಂಗಳ, ರಸ್ತೆಗಳ ಮೇಲೆ ಮನೆಗಳನ್ನು ಕಟ್ಟಿದ್ದಾರೆ. ಈ ಕಾನೂನನ್ನು ದುರುಪಯೋಗ ಮಾಡಿಕೊಳ್ಳದ ರೀತಿಯಲ್ಲಿ ಕೆಲವು ನಿರ್ಬಂಧಗಳನ್ನು ಹಾಕಿದರೆ ಒಳ್ಳೆಯದೆಂಬುದು ನನ್ನ ಭಾವನೆ. ರಸ್ತೆ ಕೆರೆಗಳ ಅಂಗಳ ಸಾರ್ವಜನಿಕ ಉಪಯೋಗಕ್ಕೆ ಮೀಸಲಿಟ್ಟ ಜಾಗಗಳಲ್ಲಿ ಮನೆಗಳನ್ನು ಕಟ್ಟಿರುವವರಿಗೆ ರೆಗ್ಯುಲರೈಸ್ ಮಾಡುವುದಿಲ್ಲವೆಂದು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಇದನ್ನು ದುರುಪಯೋಗ ಮಾಡಿಕೊಳ್ಳತಕ್ಕದ್ದು ಜಾಸ್ತಿಯಾಗುತ್ತದೆ.

ಶ್ರೀ ಬಿ. ಸೋಮಶೇಖರ್ : ರೂಲ್ಸ್‌ನಲ್ಲಿ ಅದೆಲ್ಲಾ ತರೋಣ.

ಶ್ರೀ ಬಸವರಾಜ್ ಪಾಟೀಲ್ ಯತ್ನಾಳ್ : ಮಾನ್ಯ ಅಧ್ಯಕ್ಷರೆ, ನಾನು ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ. ಆದರೆ ಒಂದು ಸಮಸ್ಯೆ ಏನೆಂದರೆ, ರೆವಿನ್ಯೂ ಲ್ಯಾಂಡ್‌ನಲ್ಲಿ ಈ ರೀತಿ ಅನೇಕ ಶ್ರೀಮಂತರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಸ್ವಲ್ಪ ಗಮನಹರಿಸಬೇಕಾಗುತ್ತದೆ. ಏಕೆಂದರೆ, ಅನೇಕ ಕಡೆ ನನ್ನ ಮತ ಕ್ಷೇತ್ರಗಳಲ್ಲಿರುವ ಮನೆಗಳಿಗೆ ಹೋದರೆ ಅವರುಗಳ ಮನೆಯಲ್ಲಿ ಕಲರ್.ಟಿ.ವಿ. ಫ್ರಿಡ್ಜ್, 8-10 ಲಕ್ಷ ರೂಪಾಯಿಗಳ ಮನೆಗಳನ್ನು ನೋಡಿದರೆ, ನಿಜವಾಗಿ ಯಾರು ಬಡವರು ಯಾರು ಗುಡಿಸಲಿನಲ್ಲಿ ವಾಸ ಮಾಡುತ್ತಾರೆ ಅವರಿಗೆ ಅವಶ್ಯಕವಾಗಿ ಬೇಕಾಗಿತ್ತು, ಅದಕ್ಕಾಗಿ ಇದನ್ನು ತಂದಿದ್ದಾರೆ. ನಮ್ಮದು ಅರ್ಕ್ಯಾಲಾಜಿಕಲ್ ಪ್ರದೇಶದಲ್ಲಿ ಬರುವಂತಹ ಒಂದು ಕೋಟೆ ಗೋಡೆ ಸುತ್ತಮುತ್ತ ಇವತ್ತು ಸಾವಿರಾರು ಮನೆಗಳನ್ನು ಕಟ್ಟಿದ್ದಾರೆ. ಈಗ ಅದನ್ನು ಈ ಪ್ರಾಚ್ಯವಸ್ತು ಇಲಾಖೆಯವರು ಒಪ್ಪುವುದಿಲ್ಲ. ದಯಮಾಡಿ....

ಅಧ್ಯಕ್ಷರು : ದಯಮಾಡಿ ನಾನು ಹೇಳುವುದನ್ನು ಕೇಳಿ. ಈ ಸಣ್ಣ ಸಣ್ಣ ವಿಚಾರಗಳಿಗೆಲ್ಲಾ ಕನ್‌ಫ್ಯೂಶನ್ ಮಾಡಿಕೊಂಡು ಅಗತ್ಯವಿಲ್ಲದ ಕ್ಲಾರಿಫಿಕೇಷನ್ ಕೇಳುವುದಕ್ಕೆ ಹೋಗಬೇಡಿ. ಸರ್ಕಾರದ ಉದ್ದೇಶ ಇರತಕ್ಕಂಥಾದ್ದು ಏನೆಂದರೆ, ಯಾರು ಸರ್ಕಾರದ ಜಮೀನನ್ನು ಅನಧಿಕೃತವಾಗಿ ಈ ಬಡಜನ ವಿಶೇಷವಾಗಿ ಸಮಾಜದ ಕೆಳಸ್ತರಕ್ಕೆ ಸೇರಿರತಕ್ಕಂಥವರು ಈಗಾಗಲೇ ಅಲ್ಲಿ ಮನೆಗಳನ್ನು ಕಟ್ಟಕೊಂಡು ವಾಸ ಮಾಡುತ್ತಿದ್ದಾರೆ. ಬೇರೆ ನಾಗರಿಕ ಸೌಲಭ್ಯಗಳು ಅವರಿಗೆ ಲಭ್ಯವಾಗುತ್ತಿಲ್ಲ, ಅವರಿಗೆ ಆ ಜಮೀನಿನ ಒಡೆತನ ಮಂಜೂರು ಮಾಡಿಕೊಡತಕ್ಕದ್ದು ಇದರ ಉದ್ದೇಶ. ಬೇರೆ ಬೇರೆ ಸೌಲಭ್ಯಕ್ಕಾಗಿ ಬೇರೆ ಬೇರೆ ಕಾನೂನುಗಳಿವೆ. ಸ್ಥಳೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬರುತ್ತವೆ, ಅವರು ನೋಡುತ್ತಾರೆ. ಈಗ ಎಲೆಕ್ಟ್ರಿಸಿಟಿ ಕೊಡಬೇಕು, ಕೆ.ಇ.ಬಿ. ಯವರು ಬರುತ್ತಾರೆ. ಮನೆ ಟ್ಯಾಕ್ಸ್ ಕಟ್ಟಬೇಕೆಂದರೆ ಪಂಚಾಯತ್‌ನವರು ಕಟ್ಟಿಸಿಕೊಳ್ಳುತ್ತಾರೆ. ಅದೆಲ್ಲಾ ಬೇರೆ ಬೇರೆ ವಿಷಯಗಳು ಇವೆ. ನಾವು ಈಗ ಮಾಡತಕ್ಕಂಥ ಪುಣ್ಯದ ಕೆಲಸ ಎಂದರೆ ಆ ಜಮೀನನ್ನು ಅವರಿಗೇ ಮಂಜೂರು ಮಾಡಿಕೊಡತಕ್ಕದ್ದು. ಅವರು ಎಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಇಷ್ಟಕ್ಕೆ ತಾವೆಲ್ಲರೂ ಒಪ್ಪಿಕೊಂಡರೆ ಪುಣ್ಯ ಬರುತ್ತದೆ. ಇದನ್ನು ಪಾಸ್ ಮಾಡೋಣ ಆಗಬಹುದಾ ?

ಶ್ರೀ ಬಿ. ಸೋಮಶೇಖರ್ : ನನ್ನ ಕ್ಷೇತ್ರದಲ್ಲೇ ನಾಲ್ಕು ಸಾವಿರ ಮನೆಗಳಿವೆ.

ಶ್ರೀ ಕಾಗೋಡು ತಿಮ್ಮಪ್ಪ : ಇದರಲ್ಲಿ ಭಿನ್ನಾಭಿಪ್ರಾಯ ಏನೂ ಇಲ್ಲ..

ಅಧ್ಯಕ್ಷರು : ನೀವು ಜಾಸ್ತಿ ಹೊತ್ತು ಮಾತನಾಡಿದರೆ ನೀವು ಹೋರಾಡಿದ್ದು, ಮತ್ತು ಎಲ್ಲೆಲ್ಲಿ ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡಿದ್ದೀರಿ ಎಂದು ಅವರು ಹೇಳಿಬಿಡುತ್ತಾರೆ. ಆಗ ಬಹಳ ತೊಂದರೆ ಸಿಕ್ಕಿಹಾಕಿಕೊಳ್ಳುತ್ತೀರಿ. ನೋಡಿ, ನೀವು ಸುಮ್ಮನೆ ಕುಳಿತುಬಿಟ್ಟರೆ ಗೌರವ ಹೆಚ್ಚು.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲಿ ರೋಡ್ ಮಾರ್ಜಿನ್ ಮತ್ತು ಕೆರೆ ಅಂಗಳ ಇದ್ದರೆ.

ಅಧ್ಯಕ್ಷರು : ಏನು ಕಾರಣ ಎಂಬುದು ಗೊತ್ತಿಲ್ಲ, ಮಾನ್ಯ ವಾಟಾಳರು ಸುಮ್ಮನೆ ಕುಳಿತಿದ್ದಾರೆ. ಮಾನ್ಯ ವಾಟಾಳರು ಎದ್ದರೆ ಇವರು ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ರೋಡ್ ಮಾರ್ಜಿನ್, ಕೆರೆ ಅಂಗಳ ಇದ್ದರೆ, ಏಕೆಂದರೆ ಈಗ ಫಾರೆಸ್ಟನ್ನು ಹೊರತುಪಡಿಸಿದ್ದೀರಿ...

ಅಧ್ಯಕ್ಷರು : ಈಗ ಮುನಿಯಪ್ಪನವರು ಕೇಳಿದರು. ನಿಮ್ಮ ರೆವಿನ್ಯೂ ರೆಕಾರ್ಡ್ಸ್‌ನಲ್ಲಿ ತೋಪು ಇದ್ದರೆ, ಸ್ಮಶಾನ ಇದ್ದರೆ, ಕೆರೆ ಇದ್ದರೆ ಮಂಜೂರು ಮಾಡುವುದಕ್ಕೇ ಬರುವುದಿಲ್ಲ. ಕೆರೆ ಅಂಗಳದಲ್ಲಿ, ರಸ್ತೆಯಲ್ಲಿ ಮನೆಗಳನ್ನು ಕಟ್ಟಿಸಿಕೊಂಡಿದ್ದರೆ ಅದು ಹೇಗೆ ಉಳಿಯುತ್ತದೆ? It is not applicable to that. It is simply getting confined to the unauthorised occupancy of government land where dwelling houses have come up. It does not include tanks, burial grounds and gunduthopu. ಅದು ಯಾವುದಕ್ಕೂ ಬರುವುದಿಲ್ಲ. It is already specified. ನಾವು ಏಕೆ ತಲೆ ಕೆಡೆಸಿಕೊಳ್ಳಬೇಕು?

ಶ್ರೀ ಕಾಗೋಡು ತಿಮ್ಮಪ್ಪ : ಈಗ ಅವರು ನಿಯಮಾವಳಿ ಮಾಡುವಾಗ...

(ಗೊಂದಲ)

ಅಧ್ಯಕ್ಷರು : ನಾವು ಕ್ಲಾರಿಫಿಕೇಷನ್ಸ್ ಮಾಡುವುದು ಬೇಡ. ನಮ್ಮ ಅತಿಬುದ್ಧಿವಂತಿಕೆಯಿಂದ ಆ ಜನರಿಗೆ ತೊಂದರೆ ಮಾಡುವುದು ಬೇಡ. ಈಗ ಪರ್ಯಾಲೋಚನಾ ಪ್ರಸ್ತಾವ...

ಅಧ್ಯಕ್ಷರು : ಪ್ರಸ್ತಾವ ಏನೆಂದರೆ.

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

*ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು*

***ಖಂಡ :2***

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ಖಂಡ 2 ವಿಧೇಯಕದ ಅಂಗವಾಗಿರುತ್ತದೆ.

*(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)*

*(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು).*

*ಖಂಡ 1 ಇತ್ಯಾದಿ*

ಅಧ್ಯಕ್ಷರು : ಪ್ರಸ್ತಾವ ಏನೆಂದರೆ-

'ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು*

'ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು

*ಪ್ರಸ್ತಾವದ ಅಂಗೀಕಾರ*

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿ) : ಮಾನ್ಯ ಅಧ್ಯಕ್ಷರೇ, 'ವಿಧಾನ ಪರಿಷತ್ತಿನಿಂದ ಅಂಗೀಕೃತ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ'.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ-

'ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು".

*ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.*

ಶ್ರೀ ಜೆ.ಹೆಚ್ ಪಟೇಲ್ : ಹೇಗೂ ಇದು ಅನುಮೋದನೆ ಆಯಿತಲ್ಲಾ. ಮಾನ್ಯ ಸದಸ್ಯರು ನನಗೆ ಒಂದು ಪ್ರಶ್ನೆ ಕೇಳಿದ್ದಾರೆ, ಅದು ಬಹಳ ಚೆನ್ನಾಗಿ ಇದೆ. "Unauthorised cultivations are to be regularised". Okay. Then "how many marriages have to be solenised?" Unauthorised cultivation, that means how many marriages will have to be solemnised?

MR. SPEAKER : That is exactly what Mr. Kharge pointed out.

SRI J.H. PATEL : It is better to solenise it rather than allow unauthorised cultivation.

(Laughter)

MR. SPEAKER : How many people should have the courage? We have hardly courageous characters like you amongst us.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಅವರು ಮಾತು ಕೇಳಿದರೆ ಇದು ಕಪ್ಪೆ ಹಾರುತ್ತದೆ ಎಂದು ಹೇಳಿ ಏಡಿ ಹಾರೋದಕ್ಕೆ ಹೋಗಿ ಎಂಟೂ ಕಾಲು ಮುರಿದು ಕೊಂಡಿತಂತೆ. ಆದೇನೊ ನೀವು ಒಂದು ತರಹ ನಡೆದಿದ್ದೀರಿ. ಅದು ನಡೆದುಹೋಗಿದೆ. ಬೇರೆಯವರಿಗೆ....

ಅಧ್ಯಕ್ಷರು : ಏನಿಲ್ಲ. He is a generous person. ದಯಮಾಡಿ ಸಮಯವಾದಾಗಲೆಲ್ಲಾ ಹೋಗಿ ಗೈಡೆನ್ಸ್ ತೆಗೆದುಕೊಳ್ಳಿ ಕಾಲು ಮುರಿದುಕೊಳ್ಳದಂತೆ ಮಾಡಿದರೆ ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರ ಗೈಡೆನ್ಸ್‌ನಲ್ಲಿ ಮೂರು ದಿವಸವೂ ನಡೆಯುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ನಿಮಗೆ ಅಲ್ಲಿಗೆ ಹೋಗುವುದು ನಾಚಿಕೆ ಅನ್ನಿಸಿದರೆ ಶ್ರೀ ಕಾಗೋಡು ತಿಮ್ಮಪ್ಪನವರ ಹತ್ತಿರ ಕೇಳಿ. ಅವರೇ ಗೈಡ್ ಮಾಡುತ್ತಾರೆ. ತೊಂದರೆ ಇಲ್ಲ.

ಶ್ರೀ ಸಿ. ಬೈರೇಗೌಡ : ಈ Solemenisation ಪ್ರಾರಂಭವಾಗುವುದು ಎಲ್ಲಿಂದ?

MR. SPEAKER : Alright, let us start it from Kolar.

## ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 1999

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) : ಮಾನ್ಯ ಅಧ್ಯಕ್ಷರೇ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಇದೊಂದು ಸರಳವಾದಂಥ ತಿದ್ದುಪಡಿ. ನಮ್ಮ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯ ಟೆಕ್ನಲಾಜಿಕಲ್ ಯೂನಿವರ್ಸಿಟಿ ಆದಮೇಲೆ ಆ ಫ್ಯಾಕಲ್ಟಿಗಳಿಗೆ ಬೇರೆ ನಮ್ಮ ಯೂನಿವರ್ಸಿಟಿಯಲ್ಲಿ ಯಾವುದೇ ಮೆಂಬರ್ ಶಿಫ್ ಇರಬಾರದು ಎನ್ನತಕ್ಕದ್ದು ಒಂದು. ಎರಡನೆಯದು ಎಂದರೆ, ಹಿಂದೆ ನಮ್ಮ ಡೈರೆಕ್ಟರ್ ಈ ಯೂನಿವರ್ಸಿಟಿ ಬಾಡೀಸ್‌ನಲ್ಲಿ ಅವರು ಮೆಂಬರ್ ಆಗಿರುತ್ತಿದ್ದರು. ಅದರ ಬದಲಾಗಿ ಈಗ ಕಮೀಷನರ್ ಫಾರ್ ಕೊಲೆಜಿಯೇಟ್ ಎಜ್ಯುಕೇಷನ್ ಅವರನ್ನು ಮೆಂಬರ್ ಮಾಡತಕ್ಕದ್ದು ಇದೆ. ಇನ್ನೊಂದು, ಹಿಂದೆ ಚೇರ್ಮನ್ ಆಫ್ ಪಿ.ಯು.ಸಿ. ಬೋರ್ಡ್ ಅವರು ಮೆಂಬರ್ ಆಗಿರುತ್ತಿದ್ದರು. ಅದರ ಬದಲಿಗೆ ಡೈರೆಕ್ಟರ್ ಆಫ್ ಪಿ.ಯು.ಸಿ. ಬೋರ್ಡನ್ನು ಮೆಂಬರ್ ಮಾಡತಕ್ಕದ್ದು. ಇದು ಸರಳ ತಿದ್ದುಪಡಿ ಇದೆ. ಇದಕ್ಕೆ ಎಲ್ಲರೂ ಅನುಮೋದನೆಯನ್ನು ಕೊಡಬೇಕೆಂದು ಕೇಳುತ್ತೇನೆ.